C.R.P.67

| Form No.4 (Civil) Deposition Sheets (R.P.No.57) |
|---|

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆ: 101/2023 C/w 113/2023**

ಪ್ರಾಸಾ. 34 ಚಾಸಾ. 55

| | |
|---|---|
| ಸಾಕ್ಷಿದಾರರ ಹೆಸರು | ಶಿವಮಲವಯ್ಯ |
| ತಂದೆಯ ಹೆಸರು | ಕರಿಪವಡಪ್ಪ |
| ವಯಸ್ಸು | 62 ವರ್ಷಗಳು |
| ಉದ್ಯೋಗ | ನಿವೃತ್ತ ಡಿ.ವೈ.ಎಸ್.ಪಿ. |
| ವಾಸ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ: 30.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಈ ಪ್ರಕರಣದ ಕಡತವನ್ನು ದಿ:21.11.2021 ರಂದು ಚಾಸಾ-54 ರವರಿಂದ ಪಡೆದುಕೊಂಡೆನು.

2. ನಂತರ ಗುನ್ಹೆ ಸ್ಥಳದಲ್ಲಿ ಚಾಸಾ-10 ಮತ್ತು 11 ರವರ ಸಮಕ್ಷಮ ನಿಪಿ-2 ರ ಪ್ರಕಾರ ಸ್ಥಳ ಮಹಜರ್ ಕ್ರಮ ಜರುಗಿಸಿದೆನು. ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು ಮತ್ತು ಒಂದು ಕಲ್ಲನ್ನು ಪ್ರತ್ಯೇಕ ಪ್ಲಾಸ್ಟಿಕ್ ಬಾಟಲ್ ಗಳಲ್ಲಿ ಸ್ಯಾಂಪಲ್ ತೆಗೆದುಕೊಂಡೆ. ಚಾಸಾ-1 ರವರು ತೋರಿಸಿದ ಕಲ್ಲನ್ನು ವಶಪಡಿಸಿಕೊಂಡೆನು. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಿಪಿ-3 ರ ಎರಡು

ಫೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿ ಮು.ಮ.2 ರಿಂದ 4 ಇವುಗಳನ್ನು ನೋಡಿ ಗುರುತಿಸಿರುತ್ತಾರೆ.

3. ನಂತರ ಚಾಸಾ-8 ರವರ ಮನೆಯ ಮುಂಭಾಗದಲ್ಲಿ ಆರೋಪಿತರು ಹಲ್ಲೆ ಮಾಡಿದ ಸ್ಥಳದಲ್ಲಿ ಚಾಸಾ-10 ಮತ್ತು 11 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-4 ರ ಪ್ರಕಾರ ಸ್ಥಳ ಮಹಜರ್ ಮಾಡಿದೆನು. ಸ್ಥಳದಲ್ಲಿ ಸಿಮೆಂಟ್ ರಸ್ತೆಯ ಮೇಲೆ ಬಿದ್ದಿದ್ದ ರಕ್ತ ಬಿದ್ದಿದ್ದ ರಕ್ತದ ಸ್ಯಾಂಪಲ್ ತೆಗೆದುಕೊಂಡೆನು ಮತ್ತು ಸ್ಥಳದಲ್ಲಿದ್ದ ಹಿಡಿ ಗಾತ್ರದ ಎರಡು ದೊಣ್ಣೆಗಳನ್ನು, ಒಂದು ಗುದಮೊಟ್ಟೆಯನ್ನು, ರಕ್ತ ಮಿಶ್ರಿತ ಮಣ್ಣನ್ನು ಮತ್ತು ರಕ್ತದ ಕಲೆಯಿಲ್ಲದೇ ಇರುವ ಮಣ್ಣನ್ನು ವಶಪಡಿಸಿಕೊಂಡೆನು. ರಕ್ತದ ಕಲೆಯಿರುವ ಹುಲ್ಲನ್ನು ಸ್ಥಳದಲ್ಲಿ ವಶಪಡಿಸಿಕೊಂಡೆನು. ಸ್ಥಳದಲ್ಲಿ ನಕ್ಷೆ ತಯಾರಿಸಿದೆನು. ಸಾಕ್ಷಿ ಗುರುತಿಸಿದ ನಕ್ಷೆಯನ್ನು <u>ನಿಪಿ-4(ಡಿ)</u> ಎಂದು, ಸಾಕ್ಷಿಯ ಸಹಿಯನ್ನು <u>ನಿಪಿ-4(ಇ)</u> ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಿಪಿ-5 ರ ಪ್ರಕಾರ ಎಂಟು ಫೋಟೋಗಳನ್ನು ತೆಗೆದೆನು. ಸಾಕ್ಷಿಯು ಮು.ಮಾ.5 ರಿಂದ 11 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

4. ನಂತರ ಗಾಯಾಳು ಮೃತ ಪಟ್ಟ ಬಗ್ಗೆ ಮಾಹಿತಿ ಬಂದಿತು, ಅಶೋಕ್ ಪುರಂ ಪೊಲೀಸ್ ಠಾಣೆಯಿಂದ ಡೆತ್ ಮೆಮೋ ಪಡೆದೆನು. ನಂತರ ಕೆಆರ್ ಆಸ್ಪತ್ರೆಯ ಶವಗಾರದಲ್ಲಿ ಚಾಸಾ-12 ರಿಂದ 14 ರವರ ಸಮಕ್ಷಮ ಮೃತ ಅರುಣ್ ಗೌಡ ಉಃ ಕಪ್ಪೆ ರವರ ನಿಪಿ-27 ರ ಶವತನಿಖಾ ಮಹಜರ್ ಕ್ರಮ ಜರುಗಿಸಿದೆನು. ಸಾಕ್ಷಿ ಗುರುತಿಸಿದ ಸಹಿಯನ್ನು <u>ನಿಪಿ-27(ಬಿ)</u> ಎಂದು ಗುರುತಿಸಲಾಯಿತು. ಆಗ ನಿಪಿ-28 ರ ಆರು ಫೋಟೋಗಳನ್ನು ತೆಗೆದಿರುತ್ತೇನೆ. ಶವದ ಮೇಲೆ 14 ಗಾಯಗಳು ಕಂಡು ಬಂದವು. ಅವುಗಳನ್ನು ನಿಪಿ-27 ರಲ್ಲಿ ನಮೂದು ಮಾಡಿರುತ್ತೇನೆ. ಚಾಸಾ-15 ಮತ್ತು 16 ರವರ ಹೇಳಿಕೆಗಳನ್ನು ಮರು ಹೇಳಿಕೆಯನ್ನು ಪಡೆದೆನು. ನಂತರ ಶವವನ್ನು ಶವಪರೀಕ್ಷೆಗಾಗಿ ಕಳುಹಿಸಿದೆನು.

**5.** ಚಾಸಾ-**5, 6** ರವರ ಹೇಳಿಕೆಗಳನ್ನು ಪಡೆದೆನು. ಚಾಸಾ-**5** ರವರು ನನ್ನ ಸಮಕ್ಷಮ ನಿಪಿ-**13** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ-**6** ರವರು ನನ್ನ ಸಮಕ್ಷಮ ನಿಪಿ-**17** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ.

**6.** ನಂತರ ದಿನಾಂಕಃ**22.11.2022** ರಂದು ಚಾಸಾ-**1** ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ-**1** ರವರು ನನ್ನ ಸಮಕ್ಷಮ ನಿಪಿ-**8** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ-**2** ರವರ ಹೇಳಿಕೆ ಪಡೆದೆನು. ಚಾಸಾ-**2** ರವರು ನನ್ನ ಸಮಕ್ಷಮ ನಿಪಿ-**9** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ.

**7.** ದಿನಾಂಕಃ**23.11.2022** ರಂದು ಮೃತನ ಬಟ್ಟೆಗಳನ್ನು ಸಂಗ್ರಹಿಸಲು ಮನವಿ ಪತ್ರ ಸಲ್ಲಿಸಿದೆನು. ಚಾಸಾ-**4, 7** ಮತ್ತು **9** ರವರ ಹೇಳಿಕೆ ಪಡೆದೆನು. ಚಾಸಾ-**4** ರವರು ನನ್ನ ಸಮಕ್ಷಮ ನಿಪಿ-**12** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ-**7** ರವರು ನನ್ನ ಸಮಕ್ಷಮ ನಿಪಿ-**19** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ-**9** ರವರು ನನ್ನ ಸಮಕ್ಷಮ ನಿಪಿ-**15** ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾರೆ.

**8.** ನಂತರ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಲು ಎ.ಡಬ್ಲ್ಯೂ.ಇ. ರವರಿಗೆ ಮನವಿ ಪತ್ರ ನೀಡಿದೆನು.

**9.** ನಂತರ ದಿನಾಂಕಃ**24.11.2022** ರಂದು ಚಾಸಾ-**1** ರವರು ಹಾಜರುಪಡಿಸಿದ ಬಟ್ಟೆಗಳನ್ನು ಚಾಸಾ-**17** ಮತ್ತು **18** ರವರ ಸಮಕ್ಷಮ ನಿಪಿ-**6** ರ ಮಹಜರಡಿಯಲ್ಲಿ ಪ್ರಕಾರ ವಶಪಡಿಸಿಕೊಂಡೆನು. ಸಾಕ್ಷಿಯು ಮು.ಮಾ.**1** ರ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ. ಆಗ ನಿಪಿ-**7** ರ ಫೋಟೋ ತೆಗೆದೆವು. ಸಾಕ್ಷಿ ಗುರುತಿಸಿದ ಸಹಿಯನ್ನು <u>ನಿಪಿ-**6**(ಡಿ)</u> ಎಂದು ಗುರುತಿಸಲಾಯಿತು.

**10.** ಚಾಸಾ-**54** ಪಿ.ಎಸ್.ಐ. ರವರು **1** ರಿಂದ **4** ನೇ ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿದರು. ಸಾಕ್ಷಿ ಗುರುತಿಸಿದ ಚಾಸಾ-**54** ರವರ ವರದಿಯನ್ನು <u>ನಿಪಿ-**76**</u> ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು <u>ನಿಪಿ-**76**(ಎ)</u> ಎಂದು ಗುರುತಿಸಲಾಯಿತು. **1** ರಿಂದ **4** ನೇ ಆರೋಪಿತರ ಸ್ವಇಚ್ಛಾ

ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯು ಕೃತ್ಯ ನಡೆದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಯನ್ನು ತಾನು ಧರಿಸಿರುವುದಾಗಿ ಮತ್ತು ಮೊಬೈಲ್ ಇಟ್ಟಿದ್ದ ಅಂಗಡಿಯನ್ನು ತೋರಿಸುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿಯ ಸದರಿ ಹೇಳಿಕೆಯ ಭಾಗವನ್ನು ನಿಪಿ-77 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-77(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ-77(ಬಿ) ಎಂದು ಗುರುತಿಸಲಾಯಿತು.

11. ನಂತರ 2 ನೇ ಆರೋಪಿಯು ತಾನು ಕೃತ್ಯ ನಡೆದ ನಂತರ ಸದರಿ ದಿನ ಧರಿಸಿದ್ದ ಬಟ್ಟೆಗಳನ್ನು ಬದಲಾಯಿಸಿಲ್ಲ ಎಂದು ಹೇಳಿಕೆ ನೀಡಿರುತ್ತಾನೆ.

12. ನಂತರ 3 ನೇ ಆರೋಪಿಯು ತಾನು ಕೃತ್ಯ ನಡೆದ ನಂತರ ಸದರಿ ದಿನ ಧರಿಸಿದ್ದ ಬಟ್ಟೆಗಳನ್ನು ಬದಲಾಯಿಸಿಲ್ಲ, ನನ್ನನ್ನು ಕರೆದುಕೊಂಡು ಹೋದರೆ ಮೊಬೈಲ್ ಅಂಗಡಿ ತೋರಿಸುವುದಾಗಿ ಹೇಳಿಕೆ ನೀಡಿರುತ್ತಾನೆ. ಆರೋಪಿಯ ಸದರಿ ಹೇಳಿಕೆಯ ಭಾಗವನ್ನು ನಿಪಿ-78 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-78(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ-78(ಬಿ) ಎಂದು ಗುರುತಿಸಲಾಯಿತು.

13. ನಂತರ 4 ನೇ ಆರೋಪಿಯು ತಾನು ಕೃತ್ಯ ನಡೆದ ನಂತರ ಸದರಿ ದಿನ ಧರಿಸಿದ್ದ ಬಟ್ಟೆಗಳನ್ನು ಬದಲಾಯಿಸಿಲ್ಲ, ನನ್ನನ್ನು ಕರೆದುಕೊಂಡು ಹೋದರೆ ಮೊಬೈಲ್ ಅಂಗಡಿ ತೋರಿಸುವುದಾಗಿ ಹೇಳಿಕೆ ನೀಡಿರುತ್ತಾನೆ. ಆರೋಪಿಯ ಸದರಿ ಹೇಳಿಕೆಯ ಭಾಗವನ್ನು ನಿಪಿ-79 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-79(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ-79(ಬಿ) ಎಂದು ಗುರುತಿಸಲಾಯಿತು.

14. ದಿನಾಂಕಃ25.11.2022 ರಂದು 5 ರಿಂದ 7 ನೇ ಆರೋಪಿತರನ್ನು ಚಾಸಾ-54 ರವರು ವರದಿಯೊಂದಿಗೆ ಹಾಜರುಪಡಿಸಿದ್ದು, ಸಾಕ್ಷಿ ಗುರುತಿಸಿದ ಚಾಸಾ-54 ರವರ ವರದಿಯನ್ನು ನಿಪಿ-80 ಎಂದು ಗುರುತಿಸಲಾಯಿತು. ಸಾಕ್ಷಿಯ

ಸಹಿಯನ್ನು <u>ನಿಪಿ-80(ಎ)</u> ಎಂದು ಗುರುತಿಸಲಾಯಿತು. 5 ರಿಂದ 7 ನೇ ಆರೋಪಿತರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

15. 5 ನೇ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಸ್ಕೂಟರ್ ಪಾರ್ಕ್ ಮಾಡಿದ ಸ್ಥಳ ತೋರಿಸುವುದಾಗಿ ಹೇಳಿದನು. ನಂತರ ಸ್ಕೂಟರನ್ನು ರಿಕವರಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಹೇಳಿಕೆಯ ಭಾಗವನ್ನು <u>ನಿಪಿ-81</u> ಎಂದು, ಸಾಕ್ಷಿಯ ಸಹಿಯನ್ನು <u>ನಿಪಿ-81(ಎ)</u> ಎಂದು, 5 ನೇ ಆರೋಪಿಯ ಸಹಿಯನ್ನು <u>ನಿಪಿ-81(ಬಿ)</u> ಎಂದು ಗುರುತಿಸಲಾಯಿತು.

16. 6 ನೇ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಆಟೋ ತೋರಿಸುವುದಾಗಿ ಹೇಳಿದನು. ನಂತರ ಆಟೋವನ್ನು ರಿಕವರಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಹೇಳಿಕೆಯ ಭಾಗವನ್ನು <u>ನಿಪಿ-82</u> ಎಂದು, ಸಾಕ್ಷಿಯ ಸಹಿಯನ್ನು <u>ನಿಪಿ-82(ಎ)</u> ಎಂದು, 5 ನೇ ಆರೋಪಿಯ ಸಹಿಯನ್ನು <u>ನಿಪಿ-82(ಬಿ)</u> ಎಂದು ಗುರುತಿಸಲಾಯಿತು.

17. 7 ನೇ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಆಟೋ ತೋರಿಸುವುದಾಗಿ ಹೇಳಿದನು. ನಂತರ ಆಟೋವನ್ನು ರಿಕವರಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಹೇಳಿಕೆಯ ಭಾಗವನ್ನು <u>ನಿಪಿ-83</u> ಎಂದು, ಸಾಕ್ಷಿಯ ಸಹಿಯನ್ನು <u>ನಿಪಿ-83(ಎ)</u> ಎಂದು, 5 ನೇ ಆರೋಪಿಯ ಸಹಿಯನ್ನು <u>ನಿಪಿ-83(ಬಿ)</u> ಎಂದು ಗುರುತಿಸಲಾಯಿತು.

18. ನಂತರ ನಮ್ಮ ಸಿಬ್ಬಂದಿಗಳಾದ ಚಾಸಾ-47, 48, 51, 52 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

19. ನಂತರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚೆಸ್ಕಾಂ, ಇವರು ನನ್ನ ವಿನಂತಿಯ ಮೇರೆಗೆ ಪಂಚರಾದ ಚಾಸಾ-24 ಮತ್ತು 25 ರವರನ್ನು ಕಳುಹಿಸಿದರು. ಪಂಚರಿಗೆ ನಿಪಿ-48 ರ ಪ್ರಕಾರ ನೋಟೀಸ್ ಕೊಟ್ಟಿರುತ್ತೇನೆ.

**20.** ನಂತರ **1** ರಿಂದ **7** ನೇ ಆರೋಪಿತರ ಬಟ್ಟೆಗಳನ್ನು ನಿಪಿ-**49** ರ ಮಹಜರ್ ಮೂಲಕ ವಶಪಡಿಸಿಕೊಂಡೆನು. ಸಾಕ್ಷಿಯ ಸಹಿಯನ್ನು ನಿಪಿ-**49(ಬಿ)** ಎಂದು ಗುರುತಿಸಲಾಯಿತು. ನಿಪಿ-**50** ರ ಪ್ರಕಾರ ಏಳು ಫೋಟೋಗಳನ್ನು ತೆಗೆಯಲಾಯಿತು.

**21.** ಸಾಕ್ಷಿಯು ಮು.ಮಾ.**17** ರಿಂದ **31** ರ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ.

**22.** ನಂತರ ಆರೋಪಿತರು ನಮ್ಮನ್ನು ದೊಡ್ಡರಸಿನಕೆರೆಯ ಕೃಷಿಪತ್ತಿನ ಸಹಾಕಾರ ಬ್ಯಾಂಕಿನ ಮುಂಭಾಗ ಗುನ್ಹೆ ಸ್ಥಳಕ್ಕೆ(ಆವರಣಕ್ಕೆ) ಕರೆದುಕೊಂಡು ಹೋಗಿ ತೋರಿಸಿದರು. ಮೃತನಿಗೆ ಹಲ್ಲೆ ಮಾಡಿದ ಸ್ಥಳ ಎಂದು ಆರೋಪಿತರು ತೋರಿಸಿದರು. ಸ್ಥಳದಲ್ಲಿ ನಿಪಿ-**51** ರ ಪ್ರಕಾರ ಮಹಜರ್ ಮಾಡಿದೆನು. ಆಗ ನಿಪಿ-**52** ರ ಎರಡು ಫೋಟೋಗಳನ್ನು ತೆಗೆಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-**51(ಬಿ)** ಎಂದು ಗುರುತಿಸಲಾಯಿತು.

**23.** ಮಧ್ಯಾಹ್ನ **12.45** ರಿಂದ **1.15** ರವರೆಗೆ ಕೃತ್ಯಕ್ಕೆ ಬಳಸಿದ ದೊಣ್ಣೆಗಳನ್ನು ಆರೋಪಿತರು ತೆಗೆದುಕೊಂಡ ಸ್ಥಳ ಎಂದು ಆರೋಪಿತರು ತೋರಿಸಿದ ಸ್ಥಳದಲ್ಲಿ ನಿಪಿ-**53** ರ ಪ್ರಕಾರ ಮಹಜರ್ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-**53(ಬಿ)** ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಕ್ಷೆ ತಯಾರಿಸಿದ್ದೇನೆ. ಸಾಕ್ಷಿ ಗುರುತಿಸಿದ ನಕ್ಷೆಯನ್ನು ನಿಪಿ-**53(ಸಿ)** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**53(ಡಿ)** ಎಂದು ಗುರುತಿಸಲಾಯಿತು. ಆಗ ನಿಪಿ-**54** ರ ಎರಡು ಫೋಟೋಗಳನ್ನು ತೆಗೆದಿರುತ್ತೇನೆ.

**24.** **2** ನೇ ಆರೋಪಿ ನಮ್ಮ ಸಮಕ್ಷಮ ಚಾಸಾ-**8** ರವರ ಮನೆಯ ಮುಂದೆ **2** ನೇ ಗುನ್ಹೆ ಸ್ಥಳವನ್ನು ತೋರಿಸಿದ್ದು, ಅಲ್ಲಿ ಮಧ್ಯಾಹ್ನ **1.25** ರಿಂದ **2.00** ಗಂಟೆಯವರೆಗೆ ನಿಪಿ-**55** ರ ಪ್ರಕಾರ ಮಹಜರ್ ಮಾಡಿದೆನು. ಸ್ಥಳದಲ್ಲಿ ನಿಪಿ-**56** ರ ಎರಡು ಫೋಟೋಗಳನ್ನು ತೆಗೆಸಲಾಯಿತು. ಆ ಸ್ಥಳದ ನಕ್ಷೆ ತಯಾರಿಸಿರುತ್ತೇನೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-**55(ಬಿ)** ಎಂದು

ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ನಕ್ಷೆಯನ್ನು ನಿಪಿ-55(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-55(ಡಿ) ಎಂದು ಗುರುತಿಸಲಾಯಿತು.

**25.** ನಿಪಿ-51 ರ ಮಹಜರ್ ಮಾಡುವಾಗ ಕಚ್ಚಾ ನಕ್ಷೆ ತಯಾರಿಸಿರುತ್ತೇನೆ. ಸಾಕ್ಷಿ ಗುರುತಿಸಿದ ನಕ್ಷೆಯನ್ನು ನಿಪಿ-51(ಸಿ) ಎಂದು ಸಾಕ್ಷಿಯ ಸಹಿಯನ್ನು ನಿಪಿ-51(ಡಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮತ್ತು ಮಾನ್ಯ ಸರ್ಕಾರಿ ಅಭಿಯೋಜಕರು 4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ಹೋಗಬೇಕಾಗಿರುವುದರಿಂದ ಅವರ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಹತ್ತಿಕಾಳ ಪ್ರಭು ಎಸ್)
2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.